ಇ) M/s. CWPRS ಪುಣೆ ಸಂಸ್ಥೆಯವರಿಂದ ನಿರೀಕ್ಷಿತ ಅಧ್ಯಯನ ವರದಿ ಪ್ರಾಪ್ತವಾದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು ಮತ್ತು ತಾತ್ಕಾಲಿಕ ಪರಿಹಾರವಾಗಿ ಹೂಳೆತ್ತಲು ರೂ.52.00 ಲಕ್ಷಗಳ ಮೊತ್ತದ ಹೂಳೆತ್ತುವ ಕಾಮಗಾರಿಯ ಅಂದಾಜು ಪಟ್ಟಿಗೆ ಮೀನುಗಾರಿಕೆ ಇಲಾಖೆಯ ನಿರ್ದೇಶಕರಿಂದ ಮಂಜೂರಾತಿ ಮತ್ತು ಸಾಕಾಗುವಷ್ಟು ಅನುದಾನ ಲಭ್ಯವಾದ ಕೂಡಲೇ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

1949 (2373) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ತಾಲ್ಲೂಕು ಅತಿದೊಡ್ಡ ತಾಲ್ಲೂಕವಾಗಿದ್ದು ಸಾರಿಗೆ ಸೌಕರ್ಯಕ್ಕಾಗಿ ಕರ್ನಾಟಕ ರಸ್ತೆ ಸಾರಿಗೆ ಬಸ್ ಘಟಕವನ್ನು ಈವರೆಗೆ ಸ್ಥಾಪಿಸಿಲ್ಲದಿರುವುದಕ್ಕೆ ಕಾರಣಗಳೇನು;

ಆ) ಬಸ್ ಘಟಕವಿಲ್ಲದೆ ನಾಗರೀಕರು ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಬಸ್ ಘಟಕ ಸ್ಥಾಪನೆಗಾಗಿ ಏನು ಕ್ರಮ ಕೈಗೊಳ್ಳಲಾಗಿದೆ;

ಈ) ಯಾವಾಗ ಬಸ್ ಘಟಕ ಸ್ಥಾಪಿಸಲಾಗುವುದು?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು):

ಅ) ಸಂಸ್ಥೆಯು ಯಾವುದೇ ನಿವೇಶನ ಹೊಂದಿರುವುದಿಲ್ಲ.

ಆ) ಪ್ರಸ್ತುತ ಹೊನ್ನಾವರದಿಂದ ಕುಮುಟಾ ಮತ್ತು ಭಟ್ಕಳ ಬಸ್ ಘಟಕಗಳು ಕ್ರಮವಾಗಿ 20 ಹಾಗೂ 35 ಕಿ.ಮೀ. ದೂರದಲ್ಲಿದ್ದು, ಹೊನ್ನಾವರ ಹಾಗೂ ತಾಲ್ಲೂಕಿನ ಸುತ್ತಮುತ್ತಲಿನ ಹಳ್ಳಿಗಳ ನಾಗರೀಕರಿಗೆ ಸಮರ್ಪಕ ಸಾರಿಗೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಇ) ಬಸ್ ಘಟಕ ಸ್ಥಾಪನೆಗಾಗಿ ನಿವೇಶನವನ್ನು ಒದಗಿಸಲು ಅರಣ್ಯ ಇಲಾಖೆಯನ್ನು ಕೋರಲಾಗಿದ್ದು, ನಿವೇಶನ ಪಡೆಯುವ ಪ್ರಕ್ರಿಯೆ ಚಾಲನೆಯಲ್ಲಿದೆ.

ಈ) ನಿವೇಶನ ಸಂಸ್ಥೆಯು ವಶಕ್ಕೆ ಪಡೆದ ನಂತರ ಸಂಸ್ಥೆಯ ಹಣಕಾಸಿನ ಪರಿಸ್ಥಿತಿಗನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

1950 (2374) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) :– ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಮಟಾ ಪಟ್ಟಣದ ಮಧ್ಯಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ಹೆಗಡೆ ಕ್ರಾಸಿನಿಂದ ಚಿತ್ರಿಗಿ ಗುಂದದ ಮೂಲಕ ಸಮುದ್ರ ಸೇರುವ ಹಂದಿಹಳ್ಳ ಎಂದು ಕರೆಯಲ್ಪಡುವ ಹಳ್ಳದಲ್ಲಿ

ಹೂಳು ತುಂಬಿದ್ದು ಸೈಡ್ ಪಿಚಿಂಗ್ ಮಾಡದೇ ಇರುವ ಕಾರಣ ಪಟ್ಟಣದ ಅಭಿವೃದ್ಧಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ಕಾಮಗಾರಿಗೆ ಅನುದಾನ ಒದಗಿಸಲಾಗುವುದೇ;

ಇ) ಸದರಿ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಆರ್. ಶ್ರೀನಿವಾಸ್ (ಪೌರಾಡಳಿತ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಇದನ್ನು ಪುರಸಭೆ ನಿರ್ಧರಿಸಬೇಕು.

ಇ) ಪುರಸಭೆಗೆ ಈ ಬಗ್ಗೆ ಪರಿಶೀಲಿಸಿ ನಿರ್ಣಯ ತೆಗೆದುಕೊಳ್ಳಲು ಸೂಚಿಸಲಾಗಿದೆ.

1952 (2004) ಶ್ರೀ ಮೋಹನ್ ಪಿ.ಸಿ. (ಚಿಕ್ಕಪೇಟೆ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಸುತ್ತಮುತ್ತ ವರ್ತುಲ ರಸ್ತೆ ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ಕಿ.ಮೀ. ನಿರ್ಮಿಸಲು ಉದ್ದೇಶಿಸಲಾಗಿದೆ; ಯಾವ ಯಾವ ಕಡೆಗಳಲ್ಲಿ ಈ ವರ್ತುಲ ರಸ್ತೆ ನಿರ್ಮಿಸಲಾಗುವುದು; ಯೋಜನೆಯ ಅಂದಾಜು ವೆಚ್ಚ ಎಷ್ಟು;

ಇ) ಯೋಜನೆಗೆ ಅಗತ್ಯವಿರುವ ಹಣವನ್ನು ಸಂಗ್ರಹಿಸುವ ಮೂಲ ಯಾವುವು;

ಈ) ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು, ರಸ್ತೆ ನಿರ್ಮಾಣ ಮಾಡಲು ಕಾಲಮಿತಿಯನ್ನು ನಿಗದಿಗೊಳಿಸಲಾಗಿದೆಯೇ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ) ಬೆಂಗಳೂರು ನಗರದ ಸುತ್ತಮುತ್ತ ಫರಿಫರಲ್ ರಿಂಗ್ ರಸ್ತೆ ಭಾಗ – I ಮತ್ತು ಭಾಗ – II ನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಆ) ರಸ್ತೆಯ ಒಟ್ಟು ಉದ್ದ 116 ಕಿ.ಮೀ. ಇರುತ್ತದೆ. ಪಿ.ಆರ್.ಆರ್. ಭಾಗ – 1 ರ ರಸ್ತೆಯನ್ನು ತುಮಕೂರು ರಸ್ತೆಯಿಂದ ಹಳೇ ಮದ್ರಾಸ್ ರಸ್ತೆಯ ಮಾರ್ಗವಾಗಿ ಹೊಸೂರು ರಸ್ತೆಯವರೆಗೆ ಹಾಗೂ ಪಿ.ಆರ್.ಆರ್. ಭಾಗ 2 ರ ರಸ್ತೆಯನ್ನು ಹೊಸೂರು ರಸ್ತೆಯಿಂದ ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆ, ಮೈಸೂರು ರಸ್ತೆ, ಮಾಗಡಿ ರಸ್ತೆ ಮಾರ್ಗವಾಗಿ